**Kannada Prabha**

Date: August 1, 2013 | Page No.3

Edition: Mysore | Language: Kannada

# ಅಂತಾರಾಷ್ಟ್ರೀಯ ಸಮ್ಮೇಳನ 9ಕ್ಕೆ

ಮೈಸೂರು: ನಗರದ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯು ಹಣಕಾಸು ಮತ್ತು ಲೆಕ್ಕಪತ್ರ ಕ್ಷೇತ್ರದಲ್ಲಿನ ಪ್ರವೃತ್ತಿ ಕುರಿತು ಆ. 9ರ ಬೆಳಗ್ಗೆ 10.30ಕ್ಕೆ ಸಂಸ್ಥೆ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ. ಟಾಟಾ ಸ್ಟೀಲ್‌ನ ಸಿಇಒ ಕೌಶಿಕ್ ಮುಖರ್ಜಿ ಮುಖ್ಯ ಭಾಷಣ ಮಾಡುವರು. ಅಂದು ಇನ್ಫೋಸಿಸ್‌ನ ನಾಗರಾಜನ್ ಶ್ರೀನಿವಾಸನ್ ಮತ್ತು ಡಾ. ಅಶೋಕ್ ಹೆಗ್ಡೆ ತಾಂತ್ರಿಕ ಉಪನ್ಯಾಸ ನೀಡುವರು. ಆ. 10ರಂದು ದುಬೈನ ಬ್ರಿಟಿಷ್ ವಿವಿಯ ಡಾ. ಇಳಂಗೊ ರಂಗಸ್ವಾಮಿ ತಾಂತ್ರಿಕ ಉಪನ್ಯಾಸ ನೀಡಲಿದ್ದು, ಸಂಜೆ 4ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಉಜ್ವನ್ ಫೈನಾನ್ಶಿಯಲ್ ಸರ್ವೀಸ್‌ನ ಸಿಇಒ ಸಮಿತ್ ಘೋಷ್ ಭಾಗವಹಿಸುವರು.